ಓ.ಎಸ್. ನಂಃ 354/2019

**ಪಿಡಬ್ಲ್ಯೂಃ1**

**ದಿನಾಂಕಃ 05.06.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಪಿ.ಡಿ ವಕೀಲರಿಂದಃ**

11. ನಮ್ಮ ತಂದೆಯಾದ ಹುಚ್ಚೇಗೌಡ ಮತ್ತು ಪ್ರತಿವಾದಿಯರ ತಂದೆಯಾದ ಸಣ್ಣೇಗೌಡರು ಸೇರಿ ಜಂಟಿಯಾಗಿ ಸರ್ವೆ ನಂಬರ್ 23/3 ರಲ್ಲಿ 20 ಗುಂಟೆ ಜಮೀನನ್ನು ನಾಗಮ್ಮರವರಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಹುಚ್ಚೇಗೌಡ ಮತ್ತು ಸಣ್ಣೇಗೌಡರು ಸರ್ವೆ ನಂಬರ್ 23/2 ರಲ್ಲಿ 18 ಗುಂಟೆ, ಸರ್ವೆ ನಂಬರ್ 22/4 ರಲ್ಲಿ 7 ಗುಂಟೆ ಜಮೀನನ್ನು ತಿಮ್ಮಮ್ಮ ಎಂಬುವವರಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

12. ಸಾಕ್ಷಿಗೆ ಈಗ ಪಹಣಿಯನ್ನು ತೋರಿಸಿದ್ದು ಅದು ಸೇಣಬಿನಕುಪ್ಪೆ ಗ್ರಾಮದ ಸರ್ವೆ ನಂಬರ್ 23/1 ರ ಜಮೀನಿನ ಪಹಣಿಯಾಗಿದ್ದು, ಸದರಿ ಪಹಣಿಯು ತಮ್ಮ ಹೆಸರಿನಲ್ಲಿರುತ್ತದೆ ಎಂದು ಸಾಕ್ಷಿಯು ಒಪ್ಪಿಕೊಂಡಿರುವ ಕಾರಣ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರ ಆಸ್ತಿಯು ನನಗೆ ನನ್ನ ತಂದೆಯಿಂದ ಬಂದಿರುತ್ತದೆ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯರಿಗೆ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಕಥೆ ಕಟ್ಟಿ ನಾನು ಈ ದಾವೆಯನ್ನು ಹೂಡಿ ದಾವಾ ಆಸ್ತಿಯನ್ನು ಕಬಳಿಸುವ ಹುನ್ನಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**

**ನ್ಯಾಯಾಧೀಶರು ಕೆ.ಆರ್.ನಗರ**